# ಕರ್ನಾಟಕ ಸರ್ಕಾರ ನಡವಳಿಗಳು

**ವಿಷಯ:-** ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಕೇಂದ್ರದ ವ್ಯಾಪ್ತಿಯಲ್ಲಿ ಡಿ.ದೇವರಾಜ ಅರಸು ಭವನ ನಿರ್ಮಾಣಕ್ಕಾಗಿ ಶಿಗ್ಗಾಂವ ಪುರಸಭೆಯಿಂದ ಸಿ.ಎ.ನಿವೇಶನವನ್ನು ಪಡೆಯುವ ಬಗ್ಗೆ.

**ಓದಲಾಗಿದೆ:-** ಆಯುಕ್ತರು,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕಕಡತ ಸಂಖ್ಯೆ: BCWD-15017/3/2022-BCWD-KBCDCS-BCWD

******

**ಪ್ರಸ್ತಾವನೆ:-**

ಮೇಲೆ ಓದಲಾದ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕಕಡತದಲ್ಲಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ, ಅರಿವು ಮತ್ತು ಇನ್ನಿತರ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲ್ಲೂಕು ಕಛೇರಿಯನ್ನೊಳಗೊಂಡಂತೆ ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಕೇಂದ್ರದಲ್ಲಿ ಡಿ.ದೇವರಾಜ ಅರಸು ಭವನ ನಿರ್ಮಾಣಕ್ಕಾಗಿ ಶಿಗ್ಗಾಂವ ಪುರಸಭೆಯ ವ್ಯಾಪ್ತಿಯ ರಿ.ಸರ್ವೇ ನಂ.141/ಕ ಪ್ಲಾಟ್ ನಂ.58ರಲ್ಲಿ 8 ಗುಂಟೆ 3.75 ಆಣೆ(ಒಟ್ಟು 833 ಚದರ ಮೀಟರ್) ನಿವೇಶನವು ಮಂಜೂರಾಗಿದ್ದು, ಸದರಿ ನಿವೇಶನವನ್ನು ಪಡೆಯಲು ಮಾರುಕಟ್ಟೆ ದರದ ಶೇ.25ರಷ್ಟು ಮೊತ್ತ ರೂ.4,16,682.00ಗಳನ್ನು ಶಿಗ್ಗಾಂವ ಪುರಸಭೆಗೆ ಪಾವತಿಸಬೇಕಿರುತ್ತದೆ. ಸದರಿ ಅನುದಾನವನ್ನು ಲೆಕ್ಕಶೀರ್ಷಿಕೆ:4225-03-283-0-01 ಆಬ್ಜೆಕ್ಟೀವ್ ಕೋಡ್ 386(ನಿರ್ಮಾಣ)ರಡಿ ಒದಗಿಸಿರುವ ಅನುದಾನದಿಂದ ಭರಿಸಬಹುದಾಗಿದೆ. ಆದ್ದರಿಂದ ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಕೇಂದ್ರದಲ್ಲಿ ಡಿ.ದೇವರಾಜ ಅರಸು ಭವನ ನಿರ್ಮಾಣಕ್ಕಾಗಿ ಸದರಿ ನಿವೇಶನ ಪಡೆಯಲು ರೂ.4,16,682.00ಗಳ ಅನುದಾನ ಬಿಡುಗಡೆ ಮಾಡುವಂತೆ ಹಾಗೂ ಸದರಿ ನಿವೇಶನವನ್ನು ಶಿಗ್ಗಾಂವ ಪುರಸಭೆಯಿಂದ ಪಡೆಯಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 411 ಬಿಎಂಎಸ್ 2022, ಬೆಂಗಳೂರು,**
**ದಿನಾಂಕ: 13-07-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ಜಿಲ್ಲೆ ಶಿಗ್ಗಾಂವ ತಾಲ್ಲೂಕು ಕೇಂದ್ರದ ಡಿ.ದೇವರಾಜ ಅರಸು ಭವನ ನಿರ್ಮಾಣಕ್ಕಾಗಿ ಶಿಗ್ಗಾಂವ ಪುರಸಭೆಯ ವ್ಯಾಪ್ತಿಯ ರಿ.ಸರ್ವೇ ನಂ.141/ಕ ಪ್ಲಾಟ್ ನಂ.58ರಲ್ಲಿ 8 ಗುಂಟೆ 3.75 ಆಣೆ(ಒಟ್ಟು 833 ಚದರ ಮೀಟರ್) ನಿವೇಶನವನ್ನು ಮಾರುಕಟ್ಟೆ ದರದ ಶೇ.25ರಷ್ಟು ಮೊತ್ತ ಅಂದರೆ ರೂ.4,16,682.00 (ನಾಲ್ಕು ಲಕ್ಷ ಹದಿನಾರು ಸಾವಿರದ ಆರು ನೂರಾ ಎಂಬತ್ತೆರಡು ರೂಪಾಯಿಗಳು ಮಾತ್ರ)ಗಳ ವೆಚ್ಚದಲ್ಲಿ ಖರೀದಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಸದರಿ ಮೊತ್ತವನ್ನು ಶಿಗ್ಗಾಂವ ಪುರಸಭೆಗೆ ಪಾವತಿಸಿ ಸದರಿ ನಿವೇಶನವನ್ನು ಇಲಾಖೆಯ ಹೆಸರಿಗೆ ನೋಂದಣಿ ಮಾಡಿಕೊಳ್ಳಲು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ನಿಯಮಾನುಸಾರ ಅಗತ್ಯ ಕ್ರಮ ವಹಿಸುವುದು.

2...

13/07/22

ಇದಕ್ಕೆ ತಗಲುವ ವೆಚ್ಚವನ್ನು 2022-23ನೇ ರಾಜ್ಯವಲಯ ಲೆಕ್ಕಶೀರ್ಷಿಕೆ:4225-03-283-0-01 ಆಬ್ಜೆಕ್ಟೀವ್ ಕೋಡ್ 386 (ನಿರ್ಮಾಣ) ಅಡಿ ಲಭ್ಯವಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್ ಡಿ 01 ಟಿಎಫ್ ಪಿ 2022, ದಿನಾಂಕ:04.04.2022ರಲ್ಲಿ ಇಲಾಖಾ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

Sheenparveen 13/07/2022

**(ಷಾಹೀನ್ ಪರ್ವಿನ್ ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು, (ಎ & ಇ) (ಲೆಕ್ಕಪರಿಶೋಧನೆ-1&2) ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ,ಹಾವೇರಿ
4. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

1. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ.
2. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.